**OS No.92/2018** **PW-1**

ದಿನಾಂಕ: **11.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಸಿ ಪಿ ವಕೀಲರಿಂದ

ನಾನು ಖರೀದಿ ಮಾಡಿರುವ ಸರ್ವೆ ನಂ. 309 ಬಿ ಯ ಒಟ್ಟು ವಿಸ್ತೀರ್ಣ 2 ಎಕರೆ 4 ಗುಂಟೆ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರದಂತೆ ಸರ್ವೆ ನಂ. 309 ಬಿ ಅನ್ನು ಖರೀದಿ ಮಾಡಿರುತ್ತೇನೆ. ಖರೀದಿ ಮಾಡುವ ಸಂದರ್ಭದಲ್ಲಿ ಖರಾಬು ಸೇರಿ 2 ಎಕರೆ 4 ಗುಂಟೆ ಇತ್ತು ಎಂದರೆ ಸಾಕ್ಷಿಯು 2 ಎಕರೆ 2 ಗುಂಟೆ ಇತ್ತು ಎಂದು ನುಡಿಯುತ್ತಾರೆ. ಪಹಣಿ ಪತ್ರದಂತೆ 13 ಗುಂಟೆ ಖರಾಬು ಇತ್ತು ಎಂದರೇ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 60 ಯಾವುದಕ್ಕೆ ಸಂಬಂದಿಸಿದ ದಾಖಲೆ ಎಂದರೆ ಸಾಕ್ಷಿಯು ಸರ್ವೆ ನಂಬರ್ 309 ಬಿ ಗೆ ಸಂಬಂಧಿಸಿದ ದಾಖಲೆ ಎಂದು ನುಡಿಯುತ್ತಾರೆ. ಸರ್ವೆ ನಂ. 309 ಬಿ ಯಾವ ವರ್ಷ ಸರ್ವೆ ನಂ. 309/1 ಮತ್ತು 309/2 ಪೋಡಿ ಯಾಗಿ ಇಂಡೀಕರಣ ಆಗಿರುತ್ತದೆ ಎಂದರೆ 1994 ರಲ್ಲಿ ಪೋಡಿಯಾಗಿರುತ್ತದೆ 2012-13 ರಲ್ಲಿ ಇಂಡೀಕರಣವಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 309 ಬಿ 1994 ರಲ್ಲಿ ಪೋಡಿಯಾಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 309 ಎ ಯಲ್ಲಿ 11 ಗುಂಟೆಯನ್ನು ಅಂಚೆ ಕಛೇರಿಗೆ ತಹಶೀಲ್ದಾರರವರು ನೀಡಿದ ಸಂದರ್ಭದಲ್ಲಿ ಸದರಿ ಸರ್ವೆ ನಂಬರ್ 309/1 ಮತ್ತು 309/2 ಎಂದು ಪೋಡಿಯಾಗಿರುತ್ತದೆ ಎಂದರೆ ಸರಿಯಲ್ಲ. ಅದರಂತೆ ಅಂಚೆ ಕಛೇರಿಗೆ ನೀಡಿರುವ 11 ಗುಂಟೆಯು ಸರ್ವೆ ನಂ. 309 /2 ಆಗಿ ಪೋಡಿಯಾಗಿರುತ್ತದೆ ಎಂದರೆ ಸರಿಯಲ್ಲ. ನಂತರದಲ್ಲಿ ಸರ್ವೆ ನಂ. 309/1 ರ ಪಹಣಿ ಪತ್ರದಲ್ಲಿ 1 ಎಕರೆ 29 ಗುಂಟೆ ಸರ್ಕಾರ ಎಂದು 2 ಗುಂಟೆ ಬಾವಿ ಖರಾಬು ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಡಿ 1 ರಂತೆ ಆರ್.ಆರ್. ನಂಬರ್ 808 ರ ಪ್ರಕಾರ 1932 ರಲ್ಲಿ ಭೂ ಸ್ವಾಧೀನಾಧಿಕಾರಿ ಸರ್ವೆ ನಂ. 309 ರಲ್ಲ್ಲಿ 1 ಎಕರೆ 31 ಗುಂಟೆಯನ್ನು ಭೂ ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 1 ಎಕರೆ 31 ಗುಂಟೆಯೇ ಸರ್ವೆ ನಂ. 309 ಎ ಎಂದು ಡಿವಿಜನ್ ಗೊಡಿಂರುತ್ತದೆ ಹಾಗೂ ಉಳಿದ ವಿಸ್ತೀರ್ಣವು ಸರ್ವೆ ನಂಬರ್ 309 ಬಿ ಆಗಿ ಡಿವಿಜನ್ ಆಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು 1 ಎಕರೆ

31 ಗುಂಟೆ  ಸರ್ವೆ ನಂಬರ್ 309 ಬಿ  ಆಗಿರುತ್ತದೆ ಎಂದು ನುಡಿಯುತ್ತಾರೆ.  ನಿಪಿ 60 ನಾನು ದಾವಾ ಸ್ವತ್ತನ್ನು ಖರೀದಿ ಮಾಡಿದ ನಂತರದಲ್ಲಿ ಆಗಿರುವ ದಾಖಲಾತಿ ಎಂದರೆ ನನಗೆ ಗೊತ್ತಿಲ್ಲ.  ಸರ್ವೆ ನಂ. 309 ಬಿ ಗ್ರಾಮಾ ಠಾಣಾ ಜಾಗವಾಗಿದ್ದು ಅದರಲ್ಲಿ ಯಾವುದೇ ಉಳಿಕೆ ಜಮೀನುಗಳು ಇಲ್ಲದ ಕಾರಣ ಸರ್ವೆ ನಂ. 309/ಎ  ಯ  1 ಎಕರೆ 31 ಗುಂಟೆ  ಸರ್ಕಾರಿ ಜಮೀನನ್ನು ಕಬಳಿಸುವ ಉದ್ದೇಶದಿಂದ ಸರ್ಕಾರಿ ಅಧಿಕಾರಿಗಳೊಡನೆ ಶಾಮೀಲಾಗಿ  ನಿಪಿ 60 ಅನ್ನು ಸೃಷ್ಠಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 309/ಎ ಯೇ ಸರ್ವೆ ನಂಬರ್ 309/1 ಮತ್ತು ಸರ್ವೆ ನಂಬರ್ 309/2 ಆಗಿ ಡಿವಿಜನ್ ಆಗಿರುತ್ತದೆ ಎಂದರೆ ಸರಿಯಲ್ಲ.  ನಿಪಿ 60 ರ ಸೃಷ್ಠಿಕೃತ ದಾಖಲಾತಿಯ ಆಧಾರದ ಮೇಲೆ ನಾನು ನಿಪಿ 61 ರಿಂದ 63 ರ ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.  ನಿಡಿ 1 ರಿಂದ 4, 6 ರಿಂದ 35 ಮತ್ತು ನಿಡಿ 56 ರ ದಾಖಲಾತಿಗಳಲ್ಲಿ ನಮೂದಾಗಿರುವ ಸ್ವತ್ತೇ ನಿಪಿ 60 ರಲ್ಲಿರುವ ಸ್ವತ್ತು ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ತೀರ್ಥಹಳ್ಳಿ